ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
BENGALURU CENTRAL UNIVERSITY

**Central College Campus, Dr. Ambedkar Veedhi, Bengaluru - 560001**

ನಂ.ಬಿ.ಸಿ.ಯು/ಪ.ವಿ/ಮೌ.ಕಾ/2019–20 ದಿನಾಂಕ: 19.06.2019

ಗೆ,

ಎಲ್ಲಾ ಸಂಬಂಧಪಟ್ಟ ಸಂಯೋಜಿತ ಸ್ನಾತಕ ಕಾಲೇಜುಗಳ ಪ್ರಾಂಶುಪಾಲರು,
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ,
ಬೆಂಗಳೂರು.

ವಿಷಯ: ಎರಡನೆ ಸೆಮಿಸ್ಟರಿನ ಇಂಗ್ಲೀಷ್ ವಿಷಯದ ಮೌಲ್ಯಮಾಪನ ಕಾರ್ಯಕ್ಕೆ ತಮ್ಮ ಕಾಲೇಜಿನ ಬೋಧಕ ಸಿಬ್ಬಂಧಿಯನ್ನು ಕಡ್ಡಾಯವಾಗಿ ಕಳುಹಿಸುವ ಕುರಿತು.

ಉಲ್ಲೇಖ: ವಿಶ್ವವಿದ್ಯಾಲಯದ ನೆನಪೋಲೆ ದಿನಾಂಕ 07.06.2019 ಮತ್ತು 15.06.2019

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ಎಲ್ಲಾ ಪ್ರಾಂಶುಪಾಲರಿಗೆ ತಿಳಿಸಬಯಸುವುದೇನೆಂದರೆ, ದಿನಾಂಕ 12.06.2019ರಿಂದ ಇಂಗ್ಲೀಷ್ ವಿಷಯದ ಮೌಲ್ಯಮಾಪನ ಕಾರ್ಯ ಪ್ರಾರಂಭವಾಗುತ್ತದೆ ಎಂದು ದಿನಾಂಕ 07.06.2019ರ ಪತ್ರದಲ್ಲಿ ತಿಳಿಸಿ, ತಮ್ಮ ಕಾಲೇಜಿನ ಬೋಧಕ ಸಿಬ್ಬಂಧಿಯನ್ನು ಕಡ್ಡಾಯವಾಗಿ ಮೌಲ್ಯಮಾಪನಕ್ಕೆ ಕಳುಹಿಸಬೇಕೆಂದು ಕೋರಲಾಗಿತ್ತು. ಆದರೆ ನಿಮ್ಮ ಕಾಲೇಜಿನ ಸಿಬ್ಬಂಧಿ ಮೌಲ್ಯಮಾಪನ ಕಾರ್ಯದಲ್ಲಿ ಪಾಲ್ಗೊಂಡಿಲ್ಲವೆಂದು ವರಧಿ ಬಂದ ಹಿನ್ನಲೆಯಲ್ಲಿ ದಿನಾಂಕ 15.06.2019 ರಂದು ನೆನಪೋಲೆಯನ್ನು ಕಳುಹಿಸಲಾಗಿತ್ತು. ಆದರೂ ಸಹ ನಿಮ್ಮ ಕಾಲೇಜಿನ ಸಿಬ್ಬಂಧಿ ಮೌಲ್ಯಮಾಪನ ಕಾರ್ಯಕ್ಕೆ ಹಾಜರಾಗದೇ ಇರುವುದು ಕಂಡುಬಂದಿದೆ. ಆದುದರಿಂದ ತಕ್ಷಣ ನಿಮ್ಮ ಕಾಲೇಜಿನ ಬೋಧಕ ಸಿಬ್ಬಂಧಿಯನ್ನು ಮೌಲ್ಯಮಾಪನ ಕಾರ್ಯಕ್ಕೆ ದಿನಾಂಕ 20.06.2019ರಿಂದ ಕಡ್ಡಾಯವಾಗಿ ಕಳುಹಿಸಬೇಕೆಂದು ಮತ್ತೊಮ್ಮೆ ಕೋರಲಾಗಿದೆ. ನಿಮ್ಮ ಕಾಲೇಜಿನ ಸಿಬ್ಬಂಧಿಯನ್ನು ಮೌಲ್ಯಮಾಪನ ಕಾರ್ಯಕ್ಕೆ ಕಳುಹಿಸದಿರುವ ಬಗ್ಗೆ ವಿವರಣೆ ನೀಡಲು ಕೋರುತ್ತೇನೆ ಹಾಗೂ ನಿಮ್ಮ ಕಾಲೇಜಿನ ಸಿಬ್ಬಂಧಿಯನ್ನು ಮೌಲ್ಯಮಾಪನ ಕಾರ್ಯಕ್ಕೆ ಕಳುಹಿಸದೇ ಇದ್ದ ಪಕ್ಷದಲ್ಲಿ ತಮ್ಮ ಕಾಲೇಜಿನ ಫಲಿತಾಂಶವನ್ನು ಪ್ರಕಟಿಸಲಾಗುವುದಿಲ್ಲವೆಂದು ಈ ಮೂಲಕ ಸ್ಪಷ್ಟ ಪಡಿಸಲಾಗಿದೆ.

ಮೌಲ್ಯಮಾಪನ ಕಾರ್ಯಕ್ಕೆ ಬೋಧಕ ಸಿಬ್ಬಂಧಿಯನ್ನು ಕಳುಹಿಸದೆ ಇರುವ ಕಾಲೇಜಿನ ಪ್ರಾಂಶುಪಾಲರುಗಳ ಮೇಲೆ ನಿಯಮಗಳ ಪ್ರಕಾರ ಸೂಕ್ತ ಕ್ರಮ ಜರುಗಿಸಲಾಗುವುದು.

19/6/19

ಕುಲಸಚಿವರು (ಮೌಲ್ಯಮಾಪನ)